# ❋ ತೌಲನಿಕ ಧರ್ಮದ ಬಗ್ಗೆ ಸ್ವಾಮಿ ವಿವೇಕಾನಂದರು ❋

ಡಾ॥ ಹೆಚ್. ರಾಮಚಂದ್ರಸ್ವಾಮಿ

ಪ್ರಪಂಚದ ಎಲ್ಲ ಗಲಭೆಗಳಿಗೂ ಪ್ರತ್ಯಕ್ಷ ಹಾಗೂ ಪರೋಕ್ಷ ಕಾರಣವೆಂದು ಪರಿಗಣಿಸಲ್ಪಟ್ಟಿರುವ ಮತೀಯ ಭಾವನೆಗಳು ಮಾನವನನ್ನು ಸಂಕುಚಿತಗೊಳಿಸುತ್ತವೆ. ಇದಕ್ಕೆ ಪರಿಹಾರವಿರುವುದು ಪೂರ್ವಗ್ರಹಪೀಡಿತರಾಗದೆ ಎಲ್ಲ ಧರ್ಮಗಳ ಪ್ರಾಮುಖ್ಯತೆಯನ್ನೂ ಗುರುತಿಸು ವುದು ಹಾಗೂ ಅವುಗಳ ತಿರುಳನ್ನು ತಿಳಿಯುವ ಪ್ರಯತ್ನದಲ್ಲಿ. ಶ್ರೀರಾಮಕೃಷ್ಣರ ಈ ಆದರ್ಶವನ್ನು ವಿಶ್ವದೆಲ್ಲೆಡೆ ಪ್ರಚುರಪಡಿಸಿದ ಸ್ವಾಮಿ ವಿವೇಕಾನಂದರ ಭಾವನೆಗಳನ್ನು ಶೃಂಗೇರಿಯ ನಿವಾಸಿಗಳಾದ ಲೇಖಕರು ಇಲ್ಲಿ ಮಂಡಿಸಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದ ಸ್ವಾಮಿ ವಿವೇಕಾನಂದ ಅಧ್ಯಯನಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು.

**ತೌ**ಲನಿಕ ಧರ್ಮವೆಂಬುದನ್ನು ಒಂದು ಶಾಸ್ತ್ರವಿಷಯವಾಗಿ ಪರಿಗಣಿಸಿರುವುದು ತೀರ ಇತ್ತೀಚೆಗೆ—ಕಳೆದ ಒಂದು ಶತಮಾನ ಕ್ಕಿಂತ ಕಡಿಮೆ ಅವಧಿಯಲ್ಲಿ. ಸ್ವಾಮಿ ವಿವೇಕಾನಂದರು ಇದನ್ನು ಶಾಸ್ತ್ರವಿಷಯವಾಗಿ ಕಲ್ಪಿಸಿಯೂ ಇರಲಾರರು. ಆದರೆ ಅವರು ಶ್ರೀರಾಮಕೃಷ್ಣರ ಜೀವನದಲ್ಲಿ ಕಾಣ್ಕೆಯಾಗಿ ಕಂಡ ವಿಶ್ವಧರ್ಮದ ಕಲ್ಪನೆಯೇ ತೌಲನಿಕ ಧರ್ಮವೆಂಬ ಶಾಸ್ತ್ರ ವಿಷಯದ ಹೂರಣವೂ ಹೌದು.

ತೌಲನಿಕ ಧರ್ಮದ ಬಗೆಗೆ ಸ್ವಾಮಿ ವಿವೇಕಾನಂದರ ಮಾತು ಮೊದಲು ದಾಖಲೆಗೊಂಡಿರುವುದು ಬಹುಶಃ ಚಿಕಾಗೋ ಸರ್ವಧರ್ಮ ಸಮ್ಮೇಳನವು ಮುಕ್ತಾಯಗೊಂಡ ಮೇಲೆ, ೧೮೯೩ರ ಕೊನೆಯಲ್ಲಿ ಅವರು ನೀಡಿದ 'ಜೀವಾತ್ಮ, ಈಶ್ವರ ಮತ್ತು ಧರ್ಮ' ಎಂಬ ಉಪನ್ಯಾಸದಲ್ಲಿ. ಅಷ್ಟರಲ್ಲಿ ಅವರು ಸರ್ವಧರ್ಮ ಸಮ್ಮೇಳನದಲ್ಲಿಯೇ ಆರಂಭಿಸಿ ಹೇಳಿಕೊಂಡು ಬಂದಿದ್ದ ವಿಶ್ವಧರ್ಮದ ಆದರ್ಶದ ಕಲ್ಪನೆಗಾಗಿ ಅಮೆರಿಕನ್ ಸಮಾಜದಲ್ಲಿ ಬಹುಮಾನ್ಯರಾಗಿದ್ದರು. ಈ ಉಪನ್ಯಾಸದಲ್ಲಿ ಅವರು ಹೇಳುತ್ತಾರೆ: "ಎಲ್ಲ ದೇಶಗಳ, ಎಲ್ಲ ಧರ್ಮಗಳ ಮಹಾತ್ಮರ, ಸಾಧುಗಳ, ಸಂತರ ವಾಣಿಗಳು ಮಿಲನಗೊಂಡು ಭೂತಕಾಲದ ಘನತೂರ್ಯವಾಣಿ ಕೇಳಿಬರುತ್ತಿದೆ. ಅದರ ಪ್ರಥಮ ಸಂದೇಶವೇ ನಿಮ್ಮಲ್ಲಿ ಮತ್ತು ಉಳಿದ ಎಲ್ಲ ಧರ್ಮ ಗಳಲ್ಲಿಯೂ ಶಾಂತಿ ನೆಲೆಸಲಿ ಎಂಬುದು. ಈ ಸಂದೇಶವು ಧರ್ಮಗಳ ಪರಸ್ಪರ ವೈಮನಸ್ಯದಿಂದ ಪ್ರೇರಿತವಾದುದಲ್ಲ; ಅದು ಸಾಮರಸ್ಯವನ್ನು ಒಳಗೊಂಡಿರುವುದು" (ಕೃತಿಶ್ರೇಣಿ, ೬.೨೯). 'ಧರ್ಮವು ಕೆಲವು ಅರ್ಥಹೀನ ಕ್ರಿಯೆಗಳು ಹಾಗೂ ಕಟ್ಟು ಪಾಡುಗಳೆಂಬ ಅಭಿಪ್ರಾಯದವರ ಕೀಚುಧ್ವನಿಯಲ್ಲಿ ಈ ಶಾಂತಿಯ ಸಂದೇಶ ಮುಳುಗಿಯೇಹೋಯಿತು" ಎಂದು ನಂತರ ವಿಷಾದಿಸುತ್ತ, "ಅನೇಕರು, ಸ್ಥಿತಿ ತಮ್ಮ ಕೈಮೀರಿ ಹೋಗಿದೆ. ಧರ್ಮವನ್ನು ಇನ್ನು ಯಾರೂ ಕೇಳುವಂತೆಯೇ ಇಲ್ಲ ಎಂದು ಭಾವಿಸುವಂತಾಗಿತ್ತು" ಎಂದು ಹೇಳುತ್ತಾರೆ. ಈ ನಿರಾಶೆಯ ನಡುವೆಯೇ ವಿವೇಕಾನಂದರಿಗೆ ಸುತ್ತಣ ಬೌದ್ಧಿಕ ಪರಿಸರದಲ್ಲಿ ಆಶಾಕಿರಣವೂ ಕಾಣಿಸುತ್ತದೆ. ಅದು ಆಗ ತಾನೇ ರೂಪುಗೊಳ್ಳುತ್ತಿದ್ದ ತೌಲನಿಕ ಧರ್ಮ. ಮೇಲಿನ



ಉಪನ್ಯಾಸದಲ್ಲಿ ಅವರು, "ಆದರೆ ಈಗ ಸ್ಥಿತಿ ಬದಲಾಗಿದೆ. ಧರ್ಮದ ನೆರವಿಗೆ ಮತ್ತೊಂದು ಸಂಗತಿ ಬಂದಿದೆ. ಯಾವು ದದು? ಅದೇ ಅನ್ಯ ಮತಗಳ ತೌಲನಿಕ ಅಧ್ಯಯನ. ನಾವು ವಿವಿಧ ಧರ್ಮಗಳನ್ನು ಗಮನಿಸಿದರೆ ಅವೆಲ್ಲದರ ಸಾರ ಒಂದೇ ಎಂದು ತಿಳಿದುಬರುವುದು... ಅದೃಷ್ಟವಶಾತ್ ನಾನು ಕ್ರೈಸ್ತ, ಬೌದ್ಧ, ಮಹಮ್ಮದೀಯ, ಮತ್ತಿತರ ಧರ್ಮಗಳನ್ನು ಓದ ತೊಡಗಿದೆ. ನನ್ನ ಧರ್ಮದಲ್ಲಿ ಸಾರಿರುವ ಮೂಲತತ್ತ್ವಗಳನ್ನೇ ಇತರ ಧರ್ಮಗಳೂ ಕೂಡ ಸಾರುತ್ತಿವೆ ಎಂದು ತಿಳಿದು ನನಗೆ ಅಚ್ಚರಿಯಾಯಿತು" ಎನ್ನುತ್ತಾರೆ. ಇದರಿಂದ ಮುಂದೆ ತೌಲನಿಕ ಧರ್ಮದ ಮುಖ್ಯ ತತ್ತ್ವವನ್ನು, 'ಒಂದು ಧರ್ಮದ ಸತ್ಯತೆ ಉಳಿದೆಲ್ಲಾ ಧರ್ಮಗಳ ಸತ್ಯತೆಯ ಮೇಲೆ ನಿಂತಿದೆ. ಆದ್ದರಿಂದ, ಒಂದು ಧರ್ಮ ಸತ್ಯವಾದರೆ ಉಳಿದೆಲ್ಲ ಧರ್ಮಗಳೂ ಸತ್ಯ ವಾಗಲೇಬೇಕು" ಎಂದು ಅವರು ಘೋಷಿಸುತ್ತಾರೆ.

ಅಲ್ಲಿಂದ ಮುಂದೆ ಒಂದು ವರ್ಷದ ನಂತರ ೧೮೯೫ರ ಜನವರಿ ೧೨ರಂದು ಅಮೆರಿಕಾದಿಂದ ಅಳಸಿಂಗ ಪೆರುಮಾಳರಿಗೆ ಬರೆದ ಒಂದು ಪತ್ರದಲ್ಲಿ "ನಾವು ಮದರಾಸಿನಲ್ಲಿ ಒಂದು ಕಾಲೇಜನ್ನು ಸ್ಥಾಪಿಸಿ, ಅಲ್ಲಿ ತೌಲನಿಕ ಧರ್ಮ, ಸಂಸ್ಕೃತ, ವೇದಾಂತ ಮತಗಳು ಮತ್ತು ಕೆಲವು ಯೂರೋಪಿಯನ್

ಭಾಷೆಗಳನ್ನು ಕಲಿಸುವಂತಾಗಬೇಕು" ಎಂದು ಹೇಳಿದ್ದಾರೆ. ೧೮೯೭ರಲ್ಲಿ ಸಂಡೇ ಟೈಮ್ಸ್ ಪತ್ರಿಕೆಯ ವರದಿಗಾರನೊಬ್ಬ "ನೀವು ತೌಲನಿಕ ಧರ್ಮವನ್ನು ಬೋಧಿಸುವಿರಾ?" ಎಂದು ಕೇಳಿದ್ದಕ್ಕೆ ವಿವೇಕಾನಂದರು 'ಧರ್ಮಗಳ ಗೌಣ ಅಂಶಗಳನ್ನು ತೆಗೆದು ಹಾಕಿ, ಅವುಗಳ ನಿಜವಾದ ತಳಹದಿಯ ಮೇಲೆ ಒತ್ತು ಕೊಟ್ಟು ಅವುಗಳೆಲ್ಲದರ ತಿರುಳನ್ನು ಬೋಧಿಸುತ್ತೇನೆ ಎಂದರೆ ಹೆಚ್ಚು ಸರಿಯಾದೀತು." ಎಂದು ಉತ್ತರಿಸುತ್ತಾರೆ. ತೌಲನಿಕ ಧರ್ಮ ಎಂದರೆ ಎಲ್ಲ ಧರ್ಮಗಳಿಗೂ ಸಾಮಾನ್ಯವಾಗಿರುವ, ಅವುಗಳ ಬಾಹ್ಯರೂಪಗಳ ಹಿಂದಿರುವ ನಿಜವಾದ ತಳಹದಿಯ ಅನ್ವೇಷಣೆ ಎಂಬುದು ವಿವೇಕಾನಂದರ ಕಲ್ಪನೆ.

ಪಾಶ್ಚಾತ್ಯ ದೇಶಗಳಿಂದ ಹಿಂದಿರುಗಿ ಬಂದ ಮೇಲೆ ೧೮೯೭ರಲ್ಲಿ ಕುಂಭಕೋಣದಲ್ಲಿ ನೀಡಿದ 'ವೇದಾಂತದ ಧ್ಯೇಯ' ಎಂಬ ತಮ್ಮ ಉಪನ್ಯಾಸದಲ್ಲಿ ವಿವೇಕಾನಂದರು ವಿಶ್ವಧರ್ಮದ ಆದರ್ಶವನ್ನು ಎತ್ತಿಹಿಡಿಯುತ್ತಾರೆ. ಪಶ್ಚಿಮ ದೇಶಗಳಲ್ಲಿ ತಾವು ಕೊಟ್ಟ ವೇದಾಂತ ಉಪನ್ಯಾಸಗಳಲ್ಲಿ ಜನರು ಮೆಚ್ಚಿಕೊಂಡಿದ್ದು ಅವುಗಳ ವೈಜ್ಞಾನಿಕ ಅಂಶವನ್ನು ಎಂಬುದನ್ನು ವಿಶದಪಡಿಸುತ್ತಾರೆ. 'ತೌಲನಿಕ ಧರ್ಮದಿಂದ ಹೊರಹೊಮ್ಮುವ ಎರಡು ತೀರ್ಮಾನಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ—ಒಂದು, ಧರ್ಮಗಳ ಸಾರ್ವತ್ರಿಕತೆಯ ಕಲ್ಪನೆ; ಇನ್ನೊಂದು, ಜಗತ್ತಿನಲ್ಲಿರುವ ಸಂಗತಿಗಳ ಏಕತೆ".

ವಿವೇಕಾನಂದರ ವಿಶ್ವಧರ್ಮದ ಕಲ್ಪನೆಗಿಂತ ಮೊದಲು ಈ ತೌಲನಿಕ ಧರ್ಮವೆಂಬ ಕಲ್ಪನೆ ಪಾಶ್ಚಾತ್ಯರ ಮನಸ್ಸಿನಲ್ಲಿ ಇತ್ತೆ? ಪ್ರಾಚೀನ ಗ್ರೀಕರಿಗೆ ತಮ್ಮ ಧರ್ಮದ ಹೊರತಾಗಿ ಇನ್ನಿತರ ಧರ್ಮಗಳ ಇರುವಿಕೆಯೇ ತಿಳಿದಿರಲಿಲ್ಲ. ಗ್ರೀಕರ ಧರ್ಮವನ್ನೇ ಮುಂದುವರಿಸಿಕೊಂಡು ಹೋದ ಪ್ರಾಚೀನ ರೋಮನ್ನರಿಗೆ ಧರ್ಮಗಳ ತುಲನೆಯ ಸಂದರ್ಭವೇ ಒದಗಲಿಲ್ಲ. ಅರಿಸ್ಟಾಟಲನಿಗೆ ನಮ್ಮ ಉಪನಿಷತ್ತುಗಳ ಇರುವಿಕೆ ತಿಳಿದಿದ್ದಿದ್ದರೆ ಪ್ಲೇಟೋನ ತತ್ತ್ವಜ್ಞಾನದ ಜೊತೆ ಅದರ ತುಲನೆ ಮಾಡುತ್ತಿದ್ದನೇನೋ. ಅರಿಸ್ಟಾಟಲನ ಶಿಷ್ಯರಾದ ಥಾಮಸ್ ಅಕ್ವಿನಾಸ್ ನಂತಹ (೧೨೨೫-೭೪)ನಂತಹ ತತ್ತ್ವವೇತ್ತರೂ ಕ್ರೈಸ್ತಮತದ ಮೇಲೆ ಗ್ರೀಕರ ಅಥವಾ ಇನ್ನಾವುದಾದರೂ ಧರ್ಮದ ಪ್ರಭಾವ ಇದ್ದಿರಬಹುದೆ ಎಂಬ ಪ್ರಶ್ನೆಯನ್ನು ಪರಿಗಣಿಸಲಿಲ್ಲ; ಕಾರಣ ಅವರು ಕ್ರೈಸ್ತ ಧರ್ಮವೊಂದೇ ವಿಶ್ವಧರ್ಮ ಎಂದು ತಿಳಿದಿದ್ದುದು. ಹದಿನೈದನೆಯ ಶತಮಾನದಲ್ಲಿ ಕ್ಯೂಸಾದ ನಿಕೊಲಾಸ್, ಧರ್ಮಗಳ ಸಮ್ಮೇಳನವೊಂದನ್ನು ಕರೆಯಬೇಕೆಂದು ಸಲಹೆ ನೀಡಿದರೂ ಅದು ಇತರ ಧರ್ಮಗಳ ಬಗ್ಗೆ ಇದ್ದ ಸಂತ ಪಾಲ್‌ನ—"ತಾವೇ ಬುದ್ಧಿವಂತರು ಎಂದುಕೊಂಡವರು ಮೂರ್ಖರಾದರು" ಎಂಬಂಥ ಧೋರಣೆಯೇ ಪ್ರಧಾನವಾಗಿದ್ದ—ಯೂರೋಪಿನ ಧಾರ್ಮಿಕ ಮನಸ್ಸಿಗೆ ಪಥ್ಯವಾಗಲಿಲ್ಲ.

ಇಂಗ್ಲೆಂಡಿನಲ್ಲಿ ಕವಿ ಜಾರ್ಜ್ ಹರ್ಬರ್ಟ್‌ನ ಅಣ್ಣ ಹರ್ಬರ್ಟ್ ಲಾರ್ಡ್ ಆಫ್ ಚೆರ್ಬರಿ, ಅನ್ಯ ಧರ್ಮಗಳನ್ನು ಕ್ರೈಸ್ತರು ಸಹಾನುಭೂತಿಯಿಂದ ಪರಿಗಣಿಸಬೇಕೆಂದು ಸಲಹೆ ಮಾಡಿದ. ಈ ಹರ್ಬರ್ಟ್‌ನ *De Religione Gentilum* ಕೃತಿಯ ಬಗ್ಗೆ (೧೬೬೩) ಡಬ್ಲ್ಯೂ ಆರ್. ಸೋರ್ಲೆ ತನ್ನ *A History of English Philosophy* ಯಲ್ಲಿ (೧೯೨೦) 'ಧರ್ಮಗಳ ತೌಲನಿಕ ಅಧ್ಯಯನಕ್ಕಾಗಿ ಕ್ರಮಬದ್ಧವಾದ ಪ್ರಯತ್ನ ನಡೆಸಿದವರಲ್ಲಿ ಹರ್ಬರ್ಟ್ ಮೊದಲಿಗನೆನ್ನಬಹುದು' ಎಂದಿದ್ದಾನೆ. ಆದರೆ ಲಾರ್ಡ್ ಹರ್ಬರ್ಟ್ ಗ್ರೀಕರ, ರೋಮನ್ನರ, ಅರಬ್ಬರ ಹಾಗೂ ಪರ್ಶಿಯನ್ನರ ಧರ್ಮಗಳಿಗಿಂತ ಮುಂದೆ ಹೋಗಲಾಗಲಿಲ್ಲ. ಆದ್ದರಿಂದ ಪ್ರಧಾನ ಪೌರಸ್ತ್ಯ ಧರ್ಮಗಳಾದ ಬೌದ್ಧ ಹಾಗೂ ಹಿಂದೂ ಧರ್ಮಗಳನ್ನು ಅವನು ಪರಿಗಣಿಸಲಿಲ್ಲ. ಆದರೂ ತೌಲನಿಕ ಧರ್ಮದ ಇತಿಹಾಸದಲ್ಲಿ ಚರ್ಚಿನ ಹೊರಗಡೆ ಇರುವ ಪ್ರಪಂಚವೆಲ್ಲವೂ ಚಿರದೂಷಿತವೆಂಬ ಕ್ರೈಸ್ತ ಧೋರಣೆಯ ವಿರುದ್ಧ ಕೇಳಿಬಂದ ಮೊದಲನೆಯ ದನಿ ಅವನದು ಎನ್ನುತ್ತಾನೆ ಜೆ.ಇ. ಕಾರ್ಪೆಂಟರ್, ತನ್ನ *Comparative Religion* ಎಂಬ ಪುಸ್ತಕದಲ್ಲಿ.

ಸಾಮ್ರಾಜ್ಯವನ್ನು ವಿಸ್ತರಿಸುತ್ತ ಎಲ್ಲೆಡೆ ವಸಾಹತುಗಳನ್ನು ಸೃಷ್ಟಿಸುತ್ತಿದ್ದ ಹದಿನೆಂಟನೆಯ ಶತಮಾನದ ಯೂರೋಪಿನ ನಾಯಕರಲ್ಲಿ ವಿಶ್ವದೃಷ್ಟಿ ಮೂಡಿದ್ದರೂ ಲೋಕದ ಧರ್ಮಗಳ ಬಗ್ಗೆ ತುಲನಾತ್ಮಕ ಮನೋಭಾವ ಮೂಡದಿದ್ದುದು ಅಚ್ಚರಿಯ ಸಂಗತಿ. ಆಗಿನ ಬೌದ್ಧಿಕತೆ ಏಕೋ ಏನೋ ಧಾರ್ಮಿಕ ಚಿಂತನೆಯ ಕಡೆಗೆ ಹೊರಳಲಿಲ್ಲ. ಆ ಶತಮಾನದ ಕೊನೆಯಲ್ಲಿ ಪೌರಸ್ತ್ಯ ಸಂಸ್ಕೃತಿಯ ಕಡೆಗೆ ಪಾಶ್ಚಾತ್ಯರ ಗಮನ ತಿರುಗಿದ್ದಂತೂ ಸತ್ಯ. ಭಾರತೀಯ ಸಂಸ್ಕೃತಿಯನ್ನು ಪ್ರಥಮವಾಗಿ ಅಧ್ಯಯನ ಮಾಡಿದ ಸರ್ ವಿಲಿಯಂ ಜೋನ್ಸ್ (೧೭೪೬-೯೪) ಅವರ ಪ್ರಯತ್ನದಿಂದಾಗಿ ಆ್ಯಂಗ್ಲೋ-ಸ್ಯಾಕ್ಸನ್ ಲೋಕದಲ್ಲಿ ಭಾರತೀಯ ಆಧ್ಯಾತ್ಮಿಕತೆಯ ಬಗ್ಗೆ ಮೊದಲ ಬಾರಿಗೆ ಕುತೂಹಲವುಂಟಾಯಿತು. ೧೭೮೪ರಲ್ಲಿ ಕೊಲ್ಕತಾದಲ್ಲಿ ಏಷಿಯಾಟಿಕ್ ಸೊಸೈಟಿ ಅಸ್ತಿತ್ವಕ್ಕೆ ಬಂದಿತು. ಚಾರ್ಲ್ಸ್ ವಿಲ್ಕಿನ್ಸ್‌ರ ಭಗವದ್ಗೀತೆಯ ಅನುವಾದ ೧೭೮೫ರಲ್ಲಿ ಲಂಡನ್ನಿನಲ್ಲಿ ಪ್ರಕಟವಾಯಿತು. ಅದೇ ಸಮಯಕ್ಕೆ ಸರ್ ವಿಲಿಯಂ ಜೋನ್ಸ್ ಮಾಡಿದ ಶಾಕುಂತಲದ ಅನುವಾದ, ಪಾಶ್ಚಾತ್ಯರ ದೃಷ್ಟಿಯಲ್ಲಿ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಉತ್ತುಂಗಕ್ಕೆ ಏರಿಸಿತು.

ಭಾರತೀಯ ತತ್ತ್ವಶಾಸ್ತ್ರವನ್ನು, ಅದರಲ್ಲೂ ಉಪನಿಷತ್ತುಗಳನ್ನು ಮೊದಲು ಪ್ರಶಂಸಿಸಿದವನು ಆರ್ಥರ್ ಶೋಪೆನ್ ಹೋವರ್ (೧೭೮೮-೧೮೬೦). ಅವನು ೧೮೧೯ರಲ್ಲಿ ಪ್ರಕಟವಾದ ತನ್ನ ಮಹಾಕೃತಿ *The World as Will and Idea*

ದಲ್ಲಿ "ಗೆಲಿಲಿಯೋವಿನ (ಜಗತ್ತು ಗೋಲಾಕಾರವಾಗಿದೆ, ಸೂರ್ಯನನ್ನು ಸುತ್ತುತ್ತದೆ) ಎಂಬ ಆವಿಷ್ಕಾರದಿಂದ ಮಾನವನ ಪ್ರಾಚೀನ ವಿವೇಕವೇನೂ ಬದಲಾಗುವುದಿಲ್ಲ. ಬದಲಾಗಿ, ಭಾರತೀಯ ತತ್ತ್ವವು ಯೂರೋಪಿಗೆ ಹರಿದುಬಂದು ನಮ್ಮ ಚಿಂತನೆಯಲ್ಲಿ ಮೂಲಭೂತ ಬದಲಾವಣೆಯನ್ನು ಉಂಟುಮಾಡುತ್ತದೆ" ಎಂದು ಹೇಳಿದ್ದಾನೆ. ತನ್ನ ಜೀವನದ ಕೊನೆಯಲ್ಲಿ ಬರೆದ *Parerga Paralipomena* ಎಂಬ ಗ್ರಂಥದಲ್ಲಿ ಅವನು ಉಪನಿಷತ್ತುಗಳನ್ನು ಕುರಿತು "ಈ ಪ್ರಪಂಚದಲ್ಲಿ ಸಾಧ್ಯವಿರುವ ಅತ್ಯಂತ ಫಲಪ್ರದವೂ, ಉತ್ತಮವೂ ಆದ ಅಧ್ಯಯನ ಉಪನಿಷತ್ತುಗಳದ್ದು. ಅದೇ ನನ್ನ ಬದುಕಿನ ನೆಮ್ಮದಿ; ನನ್ನ ಸಾವಿನಲ್ಲಿ ನೆಮ್ಮದಿಯಾಗಲಿರುವುದೂ ಅದೇ" ಎಂದಿದ್ದಾನೆ. ಶೋಪೆನ್‌ಹೋವರ್‌ನ ಈ ಮಾತುಗಳನ್ನು ಸ್ವಾಮಿ ವಿವೇಕಾನಂದರು ತಮ್ಮ ಕೊಲಂಬೋ ಭಾಷಣದಲ್ಲಿ ಉದ್ಧರಿಸಿದ್ದಾರೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ೧೮೩೨ರಲ್ಲಿ ಬೋಡೆನ್ ಸಂಸ್ಕೃತ ಪ್ರಾಧ್ಯಾಪಕ ಪೀಠ ಸ್ಥಾಪಿತವಾಯಿತು. ಸ್ವಾಮಿ ವಿವೇಕಾನಂದರಿಂದ ಪರಿಪೂರ್ಣ ವೇದಾಂತಿ ಎಂದು ಕರೆಸಿಕೊಂಡ ಮ್ಯಾಕ್ಸ್ ಮುಲ್ಲರ್ (೧೮೨೩–೧೯೦೦) ಶ್ರೀರಾಮಕೃಷ್ಣರ ಮೇಲೆ A Real Mahatman ಎಂಬ ಲೇಖನ ಬರೆದುದಲ್ಲದೆ *Life and Sayings of Sri Ramakrishna* ಎಂಬ ಪುಸ್ತಕವನ್ನೂ ಪ್ರಕಟಿಸಿದರು (೧೮೯೮). ಸ್ವಾಮಿ ವಿವೇಕಾನಂದರಿಂದ ಸಂಗ್ರಹಿಸಿದ ಸಂಗತಿಗಳ ಆಧಾರದ ಮೇಲೆಯೇ ಈ ಪುಸ್ತಕ ಬರೆದುದಾಗಿ ಅವರು ಹೇಳಿಕೊಂಡಿದ್ದಾರೆ. *Sacred Books of the East* ಎಂಬ ಸರಣಿಯಲ್ಲಿ ಮ್ಯಾಕ್ಸ್ ಮುಲ್ಲರ್ ಮಾಡಿದ ಉಪನಿಷತ್ತುಗಳ ಹಾಗೂ ಋಗ್ವೇದದ ಅನುವಾದಗಳು ಆಕರಗ್ರಂಥಗಳು ಎನಿಸಿಕೊಂಡಿವೆ. ಕೇಂಬ್ರಿಜ್‌ನಲ್ಲಿ ಅವರು ಮಾಡಿದ ಭಾಷಣಗಳು *India - What can it teach us*? ಎಂಬ ಹೆಸರಿನಲ್ಲಿ ಪ್ರಕಟವಾಗಿವೆ (೧೮೮೩). ಧರ್ಮದ ಇತಿಹಾಸದ ಮೇಲೆ ಅವರು ನೀಡಿದ ಹಿಬ್ಬರ್ಟ್ ಉಪನ್ಯಾಸಗಳು *The Origin and Growth of Religions* ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ವೇದಾಂತವನ್ನು ಅಸ್ಪಷ್ಟ, ಮಂಜಿನಂತೆ ಗ್ರಹಿಕೆಗೆ ಸಿಕ್ಕದ್ದು, ಎನ್ನುತ್ತಿದ್ದವರಿಗೆ ಉತ್ತರವಾಗಿ ಅವರು ತಮ್ಮ *Three Lectures on the Vedanta Philosophy*ಯಲ್ಲಿ (೧೮೯೪) ವೇದಾಂತವು "ಬೇಸಿಗೆಯ ಬಾಂದಳದಂತೆ ನಿಷ್ಕಲ್ಮಶವಾದ, ಪ್ರಕಾಶದಿಂದ ತುಂಬಿದ, ಭಾವಪೂರ್ಣವಾದ... ನಿಜವಾದ ಅತೀಂದ್ರಿಯ ತತ್ತ್ವ" ಎಂದಿದ್ದಾರೆ. ಆದರೂ, ಕ್ರಿಸ್ತಭಕ್ತರಾದ ಅವರು, ಆಕ್ಸ್‌ಫರ್ಡ್‌ನಲ್ಲಿ ತೌಲನಿಕ ಧರ್ಮದ ಅಧ್ಯಯನವನ್ನು ಪ್ರೋತ್ಸಾಹಿಸಲು ಏನನ್ನೂ ಮಾಡಲಿಲ್ಲ—ಏಕೆಂದರೆ ಅವರಿಗೆ ಅದರಲ್ಲಿ ನಂಬಿಕೆ ಇರಲಿಲ್ಲ. ನಿಜವಾದ ಕ್ರೈಸ್ತನಾದವನು ಕ್ರೈಸ್ತಧರ್ಮಕ್ಕೆ ಸಮಾನವಾದ ಇನ್ನೊಂದು ಧರ್ಮವಿರಬಹುದು ಎಂದು ನಂಬದ ನಿಲುವು ಅವರದಾಗಿತ್ತು. ಆಗ ಪ್ರಸಿದ್ಧವಾಗಿದ್ದ ಬ್ರಹ್ಮಸಮಾಜವು ಭಾರತೀಯ ಚರ್ಚ್ ಆಗುತ್ತದೆ ಎಂದು ನಂಬಿಕೊಂಡೇ ಸತ್ತ ಮಹನೀಯರವರು.

ಸ್ಥಾಪಿತ ಚರ್ಚುಗಳ ಹೊರಗಿದ್ದ ರೋಮಾ ರೋಲಾ, ಆರ್ನಾಲ್ಡ್ ಟಾಯ್ನ್‌ಬೀ, ಕ್ರಿಸ್ಟೋಫರ್ ಇಷರ್‌ವುಡ್ ಮುಂತಾದ ಎಷ್ಟೋ ಪಾಶ್ಚಾತ್ಯರು ಶ್ರೀರಾಮಕೃಷ್ಣರ *ಯತೋ ಮತ್, ತತೋ ಪಥ್*—ಎಷ್ಟು ಮತಗಳೋ ಅಷ್ಟು ಪಥಗಳು, ಎಲ್ಲ ಧರ್ಮಗಳೂ ದೇವರೆಡೆಗೆ ಒಯ್ಯುವ ಬೇರೆ ಬೇರೆ ದಾರಿಗಳು ಎಂಬ ಮಾತಿನ ಮಹತ್ವವನ್ನು ಮನಗಂಡಿದ್ದರು. ೧೮೯೩ರ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮೊದಲ ಬಾರಿಗೆ ಈ ಆದರ್ಶವನ್ನು ಘೋಷಿಸಿದ ಸ್ವಾಮಿ ವಿವೇಕಾನಂದರು, ಅನಂತರ ಎಲ್ಲಿ ಹೋದರೂ ಅದನ್ನು ತಮ್ಮ ಭಾಷಣದ ವಸ್ತುವನ್ನಾಗಿಸಿಕೊಂಡರು. ತೌಲನಿಕ ಧರ್ಮದ ಬಗ್ಗೆ ಎಲ್ಲಿ ಮಾತನಾಡಿದರೂ, ಅದನ್ನು ಈ ಆದರ್ಶದ ಸಂವಹನದ ಉಪಕರಣವನ್ನಾಗಿಸಿದರು. ತೌಲನಿಕ ಧರ್ಮವು ಮಾನವನ ಧಾರ್ಮಿಕ ಆಸಕ್ತಿಯನ್ನು ಹೆಚ್ಚಿಸುವುದರ ಮೂಲಕ ಲೋಕದಲ್ಲಿ ಧಾರ್ಮಿಕ ಏಕೀಕರಣವನ್ನು ಪ್ರೋತ್ಸಾಹಿಸುತ್ತದೆ ಎಂಬುದು ಅವರ ಅಭಿಪ್ರಾಯ. ವಿವೇಕಾನಂದರಿಗೆ ತೌಲನಿಕ ಧರ್ಮವೆಂದರೆ ವಿಶ್ವಧರ್ಮದ ಆದರ್ಶಕ್ಕೆ ಇರುವ ಒಂದು ಮೆಟ್ಟಿಲು. ಇದರ ಬಗ್ಗೆ ಅವರು ಮಾಡಿದ ಗಂಭೀರ ಚಿಂತನೆಯೇ ಈ ವಿಷಯಕ್ಕೇ ಮೀಸಲಾದ ಕಾಲೇಜೊಂದರ ಸ್ಥಾಪನೆಯ ಕನಸನ್ನು ಕಾಣುವಂತೆ ಮಾಡಿತು; ಜೊತೆಗೆ ಈ ವಿಷಯದ ಮೇಲೆ ಒಂದು ಪತ್ರಿಕೆಯನ್ನು ನಡೆಸಬೇಕೆಂದೂ ಅವರಿಗನ್ನಿಸಿತು.

ಇಲ್ಲಿಯವರೆಗೂ ಸ್ವಾಮಿ ವಿವೇಕಾನಂದರ ಈ ಕನಸು ನನಸಾಗಿಲ್ಲವೆನ್ನುವುದು ನಾವು ಈ ಆದರ್ಶದ ಬಗ್ಗೆ ಎಂತಹ ಉದಾಸೀನ ಮನೋಭಾವವನ್ನು ಹೊಂದಿದ್ದೇವೆ ಎಂಬುದನ್ನು ತೋರಿಸುತ್ತದೆ. ಆದರೆ ಪ್ರಪಂಚದಾದ್ಯಂತ ಹರಡಿರುವ ಶ್ರೀರಾಮಕೃಷ್ಣ ಮಹಾಸಂಘದ ಕೇಂದ್ರಗಳು ಈ ವಿಶ್ವಧರ್ಮದ ಆದರ್ಶವನ್ನು ಸಾಧ್ಯವಾದಷ್ಟೂ ಪ್ರಚುರಪಡಿಸುತ್ತಿವೆ. ಆದರೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆ ಹಾಗೂ ಸಂಶೋಧನೆಗಾಗಿ ಪ್ರೋತ್ಸಾಹ ಕೊಡುವ ಮೂಲಕ ನಮ್ಮ ಮಕ್ಕಳಿಗೆ ಈ ಆದರ್ಶವನ್ನು ಪರಿಚಯಿಸುವ ಕೆಲಸ ಇನ್ನೂ ಆಗಬೇಕಾಗಿದೆ. ಎಲ್ಲ ಧರ್ಮಗಳೂ ಸಮಾನವೆಂದೂ, ಎಲ್ಲ ಧರ್ಮಗಳೂ ಒಂದೇ ಎಂದು ಸಾರುವ ಮೂಲಕ ನಮ್ಮ ಸಂಕುಚಿತತೆಗಳನ್ನು ನಾಶಪಡಿಸಿದಂತಾಗುತ್ತದೆ.

ಲೋಕಸಾಹಿತ್ಯದಲ್ಲಿ ಧಾರ್ಮಿಕ ಸಮಾನತೆ ಹಾಗೂ ಧಾರ್ಮಿಕ ಏಕತೆಯನ್ನು ಪ್ರತಿಪಾದಿಸುವ ಅತ್ಯಂತ ಶಕ್ತಿಶಾಲಿ ಗ್ರಂಥವೆಂದರೆ ಮಹೇಂದ್ರನಾಥ ಗುಪ್ತ ('ಮ') ಬರೆದ 'ಶ್ರೀರಾಮಕೃಷ್ಣ ವಚನವೇದ' (೧೯೦೭). ಇದಕ್ಕೂ ಮುಂಚೆ ಕೇಶವಚಂದ್ರ ಸೇನ್, ಪ್ರತಾಪಚಂದ್ರ ಮಜುಂದಾರ್, ಪಂಡಿತ ಶಿವನಾಥ

ಶಾಸ್ತ್ರೀ ಮೊದಲಾದವರು ಉಪನ್ಯಾಸಗಳ ಮೂಲಕ, ಲೇಖನಗಳ ಮೂಲಕ ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯದ ಕಲ್ಪನೆಯನ್ನು ಭಾರತೀಯರಲ್ಲಿ ಸಾಕಷ್ಟು ಪ್ರಚುರಪಡಿಸಿದ್ದರು. 'ದೇವರು ಬೇರೆ ಬೇರೆ ದೇಶಗಳಿಗೆ, ಕಾಲಗಳಿಗೆ, ಜನರಿಗೆ ಸರಿಹೋಗುವ ಹಾಗೆ ಬೇರೆ ಬೇರೆ ಧರ್ಮಗಳನ್ನು ಮಾಡಿರುವನು. ಎಲ್ಲ ಪಂಥಗಳೂ ವಿಭಿನ್ನ ಪಥಗಳು; ಆದರೆ ದೇವರೆಡೆಗೆ ಕರೆದೊಯ್ಯುವ ಪಥವೇ ದೇವರಲ್ಲ. ಆದ್ದರಿಂದ ಯಾವ ಪಥವನ್ನಾದರೂ ಸರಿ, ಹೃತ್ಪೂರ್ವಕ ಭಕ್ತಿಯಿಂದ ಅನುಸರಿಸಿದರೆ ಭಗವಂತನು ಸಿಕ್ಕುವನೆಂಬುದರಲ್ಲಿ ಸಂಶಯವಿಲ್ಲ." "ನಿಮ್ಮ ಮಾರ್ಗವೇ ಸರಿ, ಇತರರದ್ದು ತಪ್ಪು ಎಂದು ಎಂದಿಗೂ ಭಾವಿಸಬೇಡಿ." "ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು ಎಲ್ಲರೂ ವಿಭಿನ್ನ ಪಥಗಳಲ್ಲಿ ಹೋಗಿ ಸೇರುವ ಗುರಿ ಒಂದೇ." "ಯಾವ ವ್ಯಕ್ತಿಯ ಮೇಲಾಗಲಿ, ಮತದ ಮೇಲಾಗಲಿ ದ್ವೇಷವನ್ನಿಟ್ಟುಕೊಳ್ಳಬಾರದು. ನಿರಾಕಾರ ದೇವರನ್ನು ನಂಬುವವರು, ಸಾಕಾರ ದೇವರನ್ನು ಪೂಜಿಸುವವರು ಎಲ್ಲರೂ ಹೋಗುವುದು ಒಬ್ಬನೇ ದೇವರ ಬಳಿಗೆ"—ಶ್ರೀರಾಮಕೃಷ್ಣರು ಹೇಳಿರುವ ಇಂತಹ ಮಾತುಗಳು 'ವಚನವೇದ'ದ ಉದ್ದಕ್ಕೂ ಹೇರಳವಾಗಿ ದೊರೆಯುತ್ತವೆ. ಆದರೆ ವಿವೇಕಾನಂದರು ವಿಶ್ವಧರ್ಮದ ರೂಪದಲ್ಲಿ ನಮ್ಮ ಮುಂದಿರಿಸಿರುವ ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯ ತತ್ತ್ವವನ್ನು ಈ ಮಾತುಗಳಷ್ಟೇ ಸಂಪೂರ್ಣವಾಗಿ ಪ್ರತಿನಿಧಿಸುವುದಿಲ್ಲ. ರಾಮಕೃಷ್ಣರ ಮಾತು, ಮೌನ, ನಗೆ, ಕಂಬನಿ, ಸಮಾಧಿ, ಸಂತೋಷ, ಸಂಭ್ರಮಗಳು—ಏಕೆ, ಅವರ ಇಡಿಯ ಜೀವನವೇ ಒಂದು ಸರ್ವಧರ್ಮ ಸಮ್ಮೇಳನದಂತಿದ್ದು ವಿಶ್ವಧರ್ಮದ ದ್ಯೋತಕವಾಗಿದೆ, ತೌಲನಿಕ ಧರ್ಮದ ಪಾಠವಾಗಿದೆ.

ಶ್ರೀರಾಮಕೃಷ್ಣರ ಸರ್ವಧರ್ಮ ಸಮಾನತೆಯ ಬಗ್ಗೆ ಬರೆದ ಮೊದಲ ವಿದೇಶೀಯರೆಂದರೆ ಮ್ಯಾಕ್ಸ್ ಮುಲ್ಲರ್. ತಮ್ಮ 'A Real Mahatman'ಎಂಬ ಲೇಖನದಲ್ಲಿ ಅವರು "ಉಪಾಸನೆಯ ಪ್ರತಿಯೊಂದು ರೂಪವೂ ತಮಗೆ ಒಂದು ಜೀವಂತ, ಉತ್ಸಾಹಭರಿತ ವೈಯಕ್ತಿಕ ಧರ್ಮತತ್ತ್ವ ಎಂದು ಶ್ರೀರಾಮಕೃಷ್ಣರು ಉದ್ಘೋಷಿಸಿದ್ದಾರೆ. ಪ್ರತಿಯೊಂದು ಧರ್ಮದಲ್ಲಿಯೂ ಇರುವ ಒಳಿತನ್ನೇ ನೋಡುವ ಮೂಲಕ ಎಲ್ಲ ಧರ್ಮಗಳನ್ನೂ ಹೇಗೆ ಒಂದುಗೂಡಿಸಬಹುದು ಎಂದು ಅವರು ತೋರಿಸಿಕೊಟ್ಟಿದ್ದಾರೆ" ಎಂದು ಹೇಳಿರುವರು. ರೋಮ್ಯಾ ರೋಲಾರವರು ತಮ್ಮ *The Life of Ramakrishna* ಎಂಬ ಗ್ರಂಥದಲ್ಲಿ "ಹಿಂದಿನಿಂದಲೂ ಹರಿದು ಬಂದ ನೂರಾರು ವಿವಿಧ ಸಂಗೀತಮೂಲಗಳನ್ನು ಒಳಗೊಂಡಿದೆ ಈ ಸ್ವರಸಂಯೋಜನೆ. ಆದರೆ ಈ ವೈವಿಧ್ಯಮಯ ಸಂಗತಿಗಳನ್ನು ತನ್ನಲ್ಲಿ ಪರಿಭಾವಿಸಿ ಅದನ್ನು ಒಂದು ರಾಜಯೋಗ್ಯ ಸ್ವರಮೇಳವನ್ನಾಗಿಸುವ ಸಂಗೀತ ಸಾಮ್ರಾಟನು ತನ್ನ ಹೆಸರನ್ನು ಅದಕ್ಕೆ ಕೊಡುತ್ತಾನೆ; ಈ ಯಶಸ್ಸಿನಿಂದ ಅವನೊಂದು ಹೊಸ ಶಕೆಯನ್ನೇ ಪ್ರಾರಂಭಿಸುತ್ತಾನೆ" ಎನ್ನುವಾಗ ಸ್ವರಮೇಳ ಎಂಬ ಮಾತಿನಲ್ಲಿ ಶ್ರೀರಾಮಕೃಷ್ಣರ ಅಧ್ಯಾತ್ಮಬೋಧನೆಗಳೆಲ್ಲವೂ ಅಡಕವಾಗಿವೆ ಎನ್ನಿಸುತ್ತದೆ. ಇತಿಹಾಸಕಾರ-ತಾತ್ತ್ವಿಕ ಆರ್ನಾಲ್ಡ್ ಟಾಯ್ನ್‌ಬೀ ಹೇಳುತ್ತಾರೆ: "ಹಿಂದೂವಿನ ದೃಷ್ಟಿಯಲ್ಲಿ ಉನ್ನತಿ ಹೊಂದಿದ ಪ್ರತಿಯೊಂದು ಧರ್ಮವೂ ಮಾನವನ ಪಾಲಿಗೆ ಒಂದು ಸತ್ಯದರ್ಶನ, ಸರಿಯಾದ ಮಾರ್ಗ, ಆವಶ್ಯಕತೆ; ಏಕೆಂದರೆ ಒಂದೊಂದೂ ಸತ್ಯದ ಒಂದೊಂದು ಮಿನುಗನ್ನು ತೋರಿಸುತ್ತದೆ, ಒಂದೊಂದು ಮಾರ್ಗದಿಂದ ಮಾನವಪ್ರಯತ್ನದ ಏಕಮೇವ ಗುರಿಯೆಡೆಗೇ ಕರೆದೊಯ್ಯುತ್ತದೆ. ಇಂತಹ ಎಲ್ಲವನ್ನೂ ಸಾಕ್ಷಾತ್ಕರಿಸಿಕೊಂಡ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಾಧನೆ ಮತ್ತು ಅನುಭವಗಳು, ಭಾರತದಲ್ಲಾಗಲಿ ಬೇರೆಲ್ಲಾಗಲಿ ಹಿಂದೆಂದೂ ಯಾರೊಬ್ಬರಿಗೂ ಸಾಧಿಸಲು ಆಗದಿದ್ದಂತಹ ಉನ್ನತ ಮಟ್ಟದವಾಗಿದ್ದವು." ರವೀಂದ್ರನಾಥ ಠಾಕೂರರು ಶ್ರೀರಾಮಕೃಷ್ಣರ ಜನ್ಮಶತಾಬ್ದಿಯ ಸಮಯದಲ್ಲಿ (೧೯೩೬) ಬರೆದ ಕವನವೊಂದರಲ್ಲಿ ಇದನ್ನೇ ಹೇಳುತ್ತಾರೆ:

**ಬಗೆಬಗೆಯ ಪೂಜೆಗಳು ಸಫಲತೆಯ ಚಿಲುಮೆಗಳು**
**ಒಂದುಗೂಡಿವೆ ನಿನ್ನ ಧ್ಯಾನದಲ್ಲಿ**
**ಅನಂತದಾನಂದವದು ಏಕತೆಯ ರೂಪದಲಿ**
**ಬಂದು ಬೆಳಗಿದೆ ನಿನ್ನ ಬಾಳಿನಲ್ಲಿ**
**ಸನಿಹ ದೂರಗಳಿಂದ ಬರುತಲಿವೆ ನಮನಗಳು**
**ಅವುಗಳೊಡನೆಯೆ ಸೇರಿಸುವೆ ನನ್ನ ನಮನ.**

ಇದೇ ಕಾರಣಕ್ಕಾಗಿ ೧೯೩೭ರಲ್ಲಿ ನಡೆದ ಧರ್ಮಸಮ್ಮೇಳನದ ಅಧ್ಯಕ್ಷಸ್ಥಾನದಿಂದ ರಾಷ್ಟ್ರಕವಿ ರವೀಂದ್ರನಾಥ ಠಾಕೂರರು 'ತಾನು ಉದ್ಧಾರಕನೆಂದು ಪ್ರಾರಂಭವಾಗುವ ಪ್ರತಿ ಧರ್ಮವೂ ಕೊನೆಗೊಳ್ಳುವುದು ದೊಡ್ಡದೊಂದು ಬಂದೀಖಾನೆಯಾಗಿ. ಸ್ಥಾಪಕನ ತ್ಯಾಗದ ತಳಹದಿಯ ಮೇಲೆ ನಿರ್ಮಿತವಾದ ಆ ಧರ್ಮವು ತಾನು ಸಾರ್ವತ್ರಿಕವೆಂದು ಹೇಳಿಕೊಳ್ಳುತ್ತಲೇ ತನ್ನ ಪುರೋಹಿತಶಾಹಿಯ ಕೈಯಲ್ಲಿ ಒಡಕಿನ, ಅಂತಃಕಲಹದ ಗೂಡಾಗಿ ಪರಿಣಮಿಸುತ್ತದೆ" ಎಂದು ಹೇಳಿ ಅಂಥ ಮತಾಂಧತೆಯ ಬಗೆಗೆ ನಮ್ಮನ್ನು ಎಚ್ಚರಿಸಿದ್ದಾರೆ. ಈ ಧರ್ಮಸಮ್ಮೇಳನದ ನಡಾವಳಿಗಳು ೧೯೩೮ರಲ್ಲಿ *Religions of the World* ಎಂಬ ಆಕರಗ್ರಂಥವಾಗಿ ಪ್ರಕಟವಾಗಿದ್ದು ಶ್ರೀರಾಮಕೃಷ್ಣರ ನಂತರದ ಐವತ್ತು ವರ್ಷಗಳಲ್ಲಿ ಲೋಕದ ಧರ್ಮಚಿಂತನೆಯ ಮೇಲಾಗಿರುವ ಅವರ ಪ್ರಭಾವದ ಪರಿಣಾಮವನ್ನು ದಾಖಲಿಸಿದೆ. ಈ ಸಂದರ್ಭದಲ್ಲಿಯೇ ಬ್ರಜೇಂದ್ರನಾಥ ಸೀಲ್ ಅವರು ಶ್ರೀರಾಮಕೃಷ್ಣರನ್ನು ಧಾರ್ಮಿಕ ಕ್ಷೇತ್ರದ ವಿಶ್ವಮಾನವತಾವಾದಿ ಎಂದು ಕರೆದುದು. **(ಮುಂದುವರಿಯುವುದು)**